# ಅಮ್ಮ–ನಾಡು

■ ವಾ. ಮುರಳೀಧರ, ತೀರ್ಥಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

ಇಳೆಗೆ ಇಳಿವ ಎಲ್ಲ ಶಿಶುವು
ಅಳುತ ನುಡಿವ ಮೊದಲ ನುಡಿಯ
ಎಲ್ಲರನ್ನು ಪೊರೆವ ಅವಳ ಅಮ್ಮ ಎನುವರು

ನಾವು ನಡೆವ ನೆಲವು ತಾಯಿ
ನಾವು ಕುಡಿವ ಜಲವು ತಾಯಿ
ಜನ್ಮ ಕೊಟ್ಟ ನೆಲವೆ ನಮ್ಮ ತಾಯಿ ನಾಡದು

ನಾವು ನುಡಿವ ನುಡಿಯು ತಾಯಿ
ನಾವು ನೆಡುವ ಗಿಡವು ತಾಯಿ
ನಾವು ಪಡೆವ ಎಲ್ಲ ಫಲವು ಅಮ್ಮನ್ನಿಂದಲೆ

ಅವಳೆ ದೇವಿ ಬಾಳ ಬೆಳಕು
ಅವಳೆ ಉಸಿರು ಅವಳೆ ಹಸಿರು
ಅವಳ ಮರೆತು ಎಂದು ನಾವು ಬಾಳಲಾರೆವು

ನಾಕವಿರಲಿ ನರಕವಿರಲಿ
ಏಕವಾಗಿ ಜಗವ ಪೊರೆವ
ಮೂಕ ಜೀವಿ ಭೂಮಿ ತಾಯಿ ಮರೆಯಬೇಡಿರಿ

ಅಮ್ಮಗಿಂತ ದೇವರಿಲ್ಲ
ಗುಮ್ಮಗಂತು ಎಡೆಯು ಇಲ್ಲ
ಸುಮ್ಮನೇಕೆ ಅವಳ ಜನರು ಬೀಳುಗಳೆವರು?

ಎಲ್ಲ ಎಡೆಯು ಇರಲು ಸೋತ
ದೇವ ತಾನು ಕಾಣೆಯಾಗಿ
ಅಮ್ಮನನ್ನು ಭುವಿಗೆ ತಂದು ಧನ್ಯನಾದನು



ಕುಂಚ ಪ್ರಪಂಚ





ಇ.ಎನ್. ಗಾನಶ್ರೀ
4ನೇ ತರಗತಿ, ಇಂಡಿಯನ್ ಇಂಟರ್‌ನ್ಯಾಷನಲ್ ಶಾಲೆ, ಚಿತ್ರದುರ್ಗ





ದಿವ್ಯಾ ದಿವಾಕರ್
4ನೇ ತರಗತಿ, ಪೂರ್ಣಪ್ರಜ್ಞ ಸ್ಕೂಲ್, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: editorsu@sudha.co.in